# ಕುಂಭಕರ್ಣನ ಉಪದೇಶದ ಪ್ರಸ್ತುತತೆ

ಡಾ. ಕೆ.ಎಲ್. ಪ್ರಸನ್ನಾಕ್ಷಿ

ಇತಿಹಾಸ ಕಾವ್ಯವೆಂದೇ ಪ್ರಸಿದ್ಧವಾಗಿರುವ ರಾಮಾಯಣದಲ್ಲಿ ಯಾವುದೇ ರಾಷ್ಟ್ರದ ನಾಯಕತ್ವಕ್ಕೆ ಅಗತ್ಯವಾದ ವಿವೇಕ ಹೇಗೆ ಅಡಕವಾಗಿದೆ ಎಂಬುದನ್ನು ತಿಳಿಸಿರುವ ಮೈಸೂರಿನ ನಿವಾಸಿಯಾದ ಡಾ.ಕೆ.ಎಲ್. ಪ್ರಸನ್ನಾಕ್ಷಿಯವರು ಸಂಸ್ಕೃತ ಸಾಹಿತ್ಯದಲ್ಲಿ ಸಾಕಷ್ಟು ಪರಿಶ್ರಮ ಹೊಂದಿದವರಾಗಿದ್ದಾರೆ.

ಭಾರತದ ಸನಾತನಾರ್ಯ ಮಹರ್ಷಿಗಳು ಎಲ್ಲ ಜೀವಿಗಳ ಸಕಲ ವಿಧವಾದ ಉನ್ನತಿಗಾಗಿ ಹೇಗೆ ಭಾವಿಸಿದರೋ ಹಾಗೆಯೇ ರಾಷ್ಟ್ರದ ಸಕಲ ರೀತಿಯ ಅಭಿವೃದ್ಧಿಗಾಗಿಯೂ ಚಿಂತನೆ ಮಾಡಿರುವರು. ಅಥರ್ವ ವೇದದಲ್ಲಿ ಪ್ರಜೆ, ರಾಜ, ಪ್ರಜೆಗಳಿಂದ ರಾಜನ ರಕ್ಷಣೆ, ರಾಷ್ಟ್ರ, ರಾಷ್ಟ್ರಧಾರಣೆ, ರಾಜನ ಸಲಹಾಕೇಂದ್ರ ಸಭೆ ಇತ್ಯಾದಿಗಳನ್ನು ತಿಳಿಸುವ ಸೂಕ್ತಗಳನ್ನು ಕಾಣಬಹುದು. ರಾಮಾಯಣ, ಮಹಾಭಾರತಗಳಂತೂ ಉದಾಹರಣೆಗಳೊಡನೆ ವ್ಯಕ್ತಿಗಳು ದೇಶದ ಹಿತಕ್ಕಾಗಿ ಅನುಸರಿಸಬೇಕಾದ ಮಾರ್ಗಗಳನ್ನು ಪ್ರಧಾನವಾಗಿ ಪ್ರತಿಪಾದಿಸಿವೆ. ಕೌಟಿಲ್ಯ, ಬೃಹಸ್ಪತಿ, ಮನು, ಸೋಮದೇವ ಮುಂತಾದವರೂ ಈ ಅಂಶಗಳನ್ನು ಅನೇಕ ರೀತಿಯಲ್ಲಿ ಪ್ರತಿಪಾದಿಸಿರುವರು.

ಸಕಲ ವಿಧ ಚರಾಚರಗಳಿಗೂ ಆಶ್ರಯವೇ ದೇಶ. ಸೋಮದೇವ ಕವಿಯು **ಭರ್ತೃದಂಡಕೋಶವೃದ್ಧಿಂ ದಿಶತಿ ಇತಿ ದೇಶಃ** ಎಂದು ದೇಶ ಪದಕ್ಕೆ "ಉತ್ತಮನಾದ ನಾಯಕನಿರುವ, ದೋಷಗಳನ್ನು ವಿಶುದ್ಧಗೊಳಿಸುವ ಶಿಕ್ಷೆಯ ಪದ್ಧತಿಯಿರುವ, ಒಡೆಯನ ಅಭ್ಯುದಯಕ್ಕೆ ಸಾಧಕವಾಗುವಂತಹ ಕೋಶವುಳ್ಳ, ಪರಿಪೂರ್ಣತೆಯ ದಿಕ್ಕನ್ನು ತೋರುವ (ಆಧಾರ)" ಎಂಬ ಅರ್ಥ ನೀಡಿದ್ದಾನೆ. ಅಷ್ಟೇ ಅಲ್ಲದೆ ಮತ್ತೂ ಕೆಲವು ಪರಿಭಾಷೆಗಳನ್ನು ನೀಡಿದ್ದಾನೆ.

**ಪಶುಧಾನ್ಯ-ಹಿರಣ್ಯ-ಸಂಪದಾ ರಾಜತೇ ಶೋಭತ ಇತಿ ರಾಷ್ಟ್ರಮ್, ವಿಷಿಣೋತಿ -ಬಧ್ನಾತಿ ಇತಿ ವಿಷಯಃ । ಜನಸ್ಯ ವರ್ಣಾಶ್ರಮ ಲಕ್ಷಣಸ್ಯ ದ್ರವ್ಯೋತ್ಪತ್ತೇರ್ವಾ ಪದಂ-ಸ್ಥಾನಂ ಇತಿ ಜನಪದಃ, ನಿಜಪತೇಃ ಉತ್ಕರ್ಷ ಜನಕತ್ವೇನ ಶತ್ರುಹೃದಯಂ ದಾರಯತಿ ಇತಿ ದಾರಕಃ ।**

"ಪಶು, ಧಾನ್ಯ, ಹಿರಣ್ಯ, ಸಂಪತ್ತುಗಳಿಂದ ಶೋಭಿಸುತ್ತ ಸರ್ವಕಾಮನೆಗಳನ್ನೂ ಪೂರ್ಣಗೊಳಿಸುತ್ತ ವಿವಿಧ ವಸ್ತು, ಸುಖ, ಭೋಗಗಳನ್ನಿತ್ತು ಸಲಹುತ್ತ, ವರ್ಣಾಶ್ರಮಾದಿ ಲಕ್ಷಣಗಳಿಂದ ಕೂಡಿದ ಜನರಿಗೆ ದ್ರವ್ಯಗಳನ್ನು ಉತ್ಪತ್ತಿಮಾಡುತ್ತ, ತನ್ನ ಒಡೆಯನಿಗೆ ಸಕಲವಿಧವಾದ ಉತ್ಕರ್ಷವನ್ನುಂಟುಮಾಡಿ, ತನ್ನ ಶತ್ರುಗಳನ್ನು ನಾಶಮಾಡುವಂತಹುದು ದೇಶ ಎಂದು ಅಭಿಪ್ರಾಯ ಪಡುತ್ತಾನೆ." (ಸೋಮದೇವ ನೀತಿಸೂತ್ರ, ಅ. ೧೯, ಜನಪದಸಮುದ್ದೇಶ, ಪು.೬೧).

ನಮ್ಮ ಜೀವನಕ್ಕೆ ಆಧಾರವಾದ ದೇಶದ, ರಾಷ್ಟ್ರದ ರಕ್ಷಣೆ ನಮ್ಮೆಲ್ಲರ ಕರ್ತವ್ಯ. ದೇಶರಕ್ಷಣೆಯ ವಿಚಾರದಲ್ಲಿ ಅದರ ನಾಗರಿಕರ ಶಾರೀರಿಕ ಶ್ರಮವಷ್ಟೇ ಅಲ್ಲದೆ ನಾಯಕರ ವಿವೇಕಕ್ಕೂ, ಉತ್ತಮ ಮಂತ್ರಾಲೋಚನೆಗೂ ಮಹತ್ತ್ವದ ಸ್ಥಾನವಿದೆ. ಕೇವಲ ಚತುರಂಗ ಬಲ ಬಲಿಷ್ಠವಾಗಿದ್ದು, ಮಂತ್ರಿಗಳಿಗೆ ಸಾಮರ್ಥ್ಯವಿಲ್ಲದಿದ್ದಲ್ಲಿ ಆ ದೇಶದ ಉನ್ನತಿಯ ಸಾಧನೆ ಕಷ್ಟವಾಗುತ್ತದೆ. ಇಂದು ನಮ್ಮ ದೇಶ ಅನುಭವಿಸುತ್ತಿರುವ ರಾಜಕೀಯ ಆರ್ಥಿಕ, ಸಾಮಾಜಿಕ, ನೈತಿಕ ಅಭದ್ರತೆಗೆ ಅಸಮರ್ಪಕ, ದುರ್ಬಲ ಮಂತ್ರಾಲೋಚನೆ ಪ್ರಧಾನ ಕಾರಣವಾಗಿದೆ. ದೇಶದ ಹಾಗೂ ನಾಯಕರ ಹಿತೋಪಾಯವನ್ನು, ಅಹಿತವೆಸಗುವವರ ವಿರುದ್ಧ ತೋರಬೇಕಾದ ಆಕ್ರೋಶವನ್ನೂ ತಿಳಿಯದ ಶಕ್ತಿಹೀನ, ಬುದ್ಧಿಹೀನ ದೇಶಭಕ್ತಿಯಿಂದ ಏನೂ ಪ್ರಯೋಜನವಾಗುವುದಿಲ್ಲ.

ಉನ್ನತ ಸ್ಥಾನಗಳನ್ನು ಅಲಂಕರಿಸಿರುವ ನಮ್ಮ ನಾಯಕರು ಹಾಗೂ ದೇಶದ ಮುಂದಿನ ಅಭಿವೃದ್ಧಿಗೆ ಬೆನ್ನೆಲುಬಾಗಿರುವ ನಮ್ಮ ಯುವಶಕ್ತಿ, ಜವಾಬ್ದಾರಿಯನ್ನರಿತು ಎಚ್ಚೆತ್ತುಕೊಂಡು ತಮ್ಮ ನಡೆನುಡಿಗಳನ್ನು ತಿದ್ದಿಕೊಂಡಲ್ಲಿ, ಬಂದೊದಗಲಿರುವ ಅಥವಾ ಬಂದೊದಗಬಹುದಾದ ಮಹದಾಪತ್ತಿನಿಂದ ದೇಶವನ್ನು ರಕ್ಷಿಸಬಹುದು. ಈ ಹಿನ್ನೆಲೆಯಲ್ಲಿ ಕುಂಭಕರ್ಣನು ರಾವಣನಿಗೆ ಹೇಳುವ (ರಾಮಾಯಣದ ಯುದ್ಧಕಾಂಡದ ೬೩ನೇ ಸರ್ಗ) ವಿವೇಕಪೂರ್ಣವಾದ ಮಾತುಗಳು, ರಾಷ್ಟ್ರ ರಕ್ಷಣೆಯ ವಿಚಾರದಲ್ಲಿ ಹಾಗೂ ಸದೃಢ ಸುಭದ್ರ ಆಡಳಿತವನ್ನು ನೀಡುವಲ್ಲಿ ಸಹಕಾರಿಯಾಗುತ್ತವೆ ಎಂಬುದರಲ್ಲಿ ಸಂಶಯವಿಲ್ಲ.

ರಾಮರಾವಣರ ನಡುವೆ ಯುದ್ಧ ಆರಂಭವಾಗಿ, ರಾವಣನ ಸೇನೆ ತುಂಬಾ ನಷ್ಟವಾಗಿ, ಅದಾಗಲೇ ಅವನ ಸೇನೆಯ ಪ್ರಧಾನರನೇಕರ ನಾಶವಾಗಿದ್ದಾಗ, ಕಳವಳಗೊಂಡ ರಾವಣ ಕುಂಭಕರ್ಣನನ್ನು ಪ್ರಯತ್ನಪೂರ್ವಕವಾಗಿ ಎಬ್ಬಿಸುತ್ತಾನೆ. ಆಗ ರಾವಣನ ಬಳಿಗೆ ಬಂದ ಕುಂಭಕರ್ಣನು ಆಡುವ ಮಾತುಗಳಿವು:

"ನಿನ್ನ ಸಲಹೆಗಾರರ ನಿರ್ಣಯದಲ್ಲಿ ಯಾವ ದೋಷವನ್ನು ಹಿಂದೆ ನಾವು ಕಂಡು ನಿನ್ನನ್ನು ಎಚ್ಚರಿಸಿದ್ದೆವೋ, ಆ ದೋಷದ ಫಲದಿಂದ, ಹಿತೈಷಿಗಳ ಬುದ್ಧಿವಾದದಲ್ಲಿ ಆಸಕ್ತಿ ತೋರದ

ನಿನಗೆ ಈಗ ಈ ದುಸ್ಥಿತಿ ಬಂದೊದಗಿದೆ. ಕೇವಲ ಶೌರ್ಯ-ದರ್ಪಗಳ ವಶನಾಗಿ, ಹಿಂದೆ-ಮುಂದೆ ನೋಡದೆ, ಫಲಾಫಲಗಳನ್ನು ಗಮನಿಸದೆ ನೀನು ಮಾಡಿದ ಅವಿವೇಕದ ಫಲ ಈಗ ನಿನ್ನೊಬ್ಬನನ್ನಷ್ಟೇ ಅಲ್ಲ, ಇಡೀ ಕುಲವನ್ನು, ರಾಷ್ಟ್ರವನ್ನು, ನಾಶದೆಡೆಗೆ ಸೆಳೆಯುತ್ತಿದೆ. ಯಾರು ಐಶ್ವರ್ಯದ, ಸ್ಥಾನದ ದುರಭಿಮಾನದಿಂದ ಪ್ರಥಮ ಪ್ರಾಶಸ್ತ್ಯ ನೀಡಿ ಮಾಡಬೇಕಾದ ಕೆಲಸವನ್ನು ಕೊನೆಯಲ್ಲೂ, ಕೊನೆಯಲ್ಲಿ ಮಾಡಬೇಕಾದುದನ್ನು ಸಮಯೋಚಿತ ಕರ್ತವ್ಯಪ್ರಜ್ಞೆ, ಆದ್ಯತೆ, ಆವಶ್ಯಕತೆಗಳನ್ನು ಅರಿಯದೆ ಮೊದಲು ಮಾಡುವನೋ ಅವನು ನೀತಿ ಅನೀತಿಗಳ ವ್ಯತ್ಯಾಸವನ್ನೇ ತಿಳಿಯಲಾರ. **ದೇಶಕಾಲವಿಹೀನಾನಿ ಕರ್ಮಾಣಿ ವಿಪರೀತವತ್ ಕ್ರಿಯಮಾಣಾನಿ ದುಷ್ಯಂತಿ** ದೇಶಕಾಲಗಳಿಗೆ ತಕ್ಕುದಲ್ಲದ, ಪ್ರತಿಕೂಲವಾದ ಕೆಲಸಗಳನ್ನು ಮಾಡಿದಲ್ಲಿ ಅವು ವ್ಯರ್ಥವಾಗುವುವು.''

ನಮ್ಮ ದೇಶದಲ್ಲಿ ಮಾನವ ಬಲಸಂಪತ್ತು ಸಮೃದ್ಧವಾಗಿರುವಾಗ, ಅದನ್ನು ಸರಿಯಾಗಿ ಬಳಸುವ ವಿಧಾನಗಳನ್ನು ಕುರಿತು ಆಲೋಚಿಸದೆ, ಇತರ ದೇಶಗಳಿಂದ ಆಮದು ಮಾಡಿಕೊಂಡ ಬರೀ ಶ್ರೀಮಂತ ವರ್ಗದ ದುರಾಸೆಗಳನ್ನು ಪೂರೈಸುವ ಯಾಂತ್ರೀಕರಣ, ಆಯಾಯಾ ಸ್ಥಳಗಳಲ್ಲಿ ಸಮೃದ್ಧವಾಗಿ ದೊರಕುವ ಪ್ರಾಕೃತಿಕ ಭೌಗೋಳಿಕ ಸಂಪತ್ತಿನ ಅಪಬಳಕೆ, ದುರ್ಬಳಕೆ ಇಲ್ಲಾ ಅನುಪಯುಕ್ತತೆ, ತತ್ಸಂಬದ್ಧ ಕೈಗಾರಿಕೆಗಳು ದೂರ ದೂರ ಸ್ಥಳಗಳಲ್ಲಿ ಪ್ರಾರಂಭವಾಗುವುದು ಇತ್ಯಾದಿ ದೇಶವಿರುದ್ಧ ಚಟುವಟಿಕೆಗಳು, ಅಂಧಾನುಕರಣ ಪ್ರವೃತ್ತಿ, ಅತಿಯಾದ ಭೋಗಲಾಲಸೆ ಇತ್ಯಾದಿ ದೇಶದ ಅಭಿವೃದ್ಧಿಗಿಂತ ಅವನತಿಗೆ ಕಾರಣವಾಗುತ್ತಿರುವುದು ಯಾರಿಗೆ ಕಾಣದ, ತಿಳಿಯದ ವಿಷಯ?

"ಯಾವ ರಾಜನು ಸಚಿವರೊಡನೆ ಕ್ಷಯ, ವೃದ್ಧಿ, ಸ್ಥಾನಗಳಿಂದ ಕೂಡಿದ ಸಾಮ, ದಾನ, ದಂಡ ಎಂಬ ಮೂರು ಕರ್ಮಗಳನ್ನು ಐದು ಪ್ರಕಾರವಾದ ಪ್ರಯೋಗಗಳಿಂದ, ಕಾರ್ಯರೂಪಕ್ಕೆ ತರುವನೋ ಆ ರಾಜನು ಉತ್ತಮವಾದ ನೀತಿ ಮಾರ್ಗದಲ್ಲಿರುವವನು. ಇಲ್ಲಿ ಕುಂಭಕರ್ಣನು ನಿರ್ದೇಶಿಸಿರುವ ಐದು ಪ್ರಕಾರ ಪ್ರಯೋಗ ಕೇವಲ ರಾಜಕೀಯ ಕ್ಷೇತ್ರಕ್ಕೆ ಅಷ್ಟೇ ಅಲ್ಲದೆ ಅಭಿವೃದ್ಧಿ ಬಯಸುವ ಮಾನವನ ಜೀವನದ ಸಕಲ ಹೆಜ್ಜೆಗಳಲ್ಲೂ ಅತ್ಯಂತ ಅವಶ್ಯ. (೧) **ಕರ್ಮಣಾಮ್ ಆರಂಭೋಪಾಯಃ** - ಕಾರ್ಯಗಳನ್ನು ಆರಂಭಿಸುವ ಉಪಾಯ, (೨) **ಪುರುಷದ್ರವ್ಯಸಂಪತ್** - ಜನರ ಬೆಂಬಲ ಮತ್ತು ಹಣ (೩) **ದೇಶಕಾಲವಿಭಾಗ** - ಯಾವಾಗ, ಎಲ್ಲಿ, ಏನು, ಹೇಗೆ ಮಾಡಬೇಕೆಂಬ ವಿವೇಕ (೪) **ವಿನಿಪಾತಪ್ರತೀಕಾರಃ**- ವಿಪತ್ತು, ವಿಘ್ನ, ತೊಂದರೆ ಮುಂತಾದವುಗಳ ನಿವಾರಣೋಪಾಯ (೫) **ಕಾರ್ಯಸಿದ್ಧಿಃ** - ಕೈಗೊಂಡ ಕೆಲಸವು ಹೇಗೆ ಸಿದ್ಧಿಸುವುದು ಎಂಬ ಸ್ಪಷ್ಟ ಕಲ್ಪನೆ. ಈ ಐವರೊಡನೆ, ರಾಜನು ನೀತಿಶಾಸ್ತ್ರಕ್ಕೆ ಅನುಗುಣವಾದ ವ್ಯವಹಾರವನ್ನು ಹೊಂದಿರಬೇಕು, ತನ್ನ ಸಹೃದಯರು ಯಾರೆಂದು ತಿಳಿದು ಕರ್ತವ್ಯದಲ್ಲಿ ನಿಷ್ಠನಾಗಿರಬೇಕು.

"ಧರ್ಮಾರ್ಥಕಾಮಗಳಲ್ಲಿ ಧರ್ಮವೇ ಅತ್ಯಂತ ಶ್ರೇಷ್ಠವಾದುದು. ವಿಶೇಷ ಸಂದರ್ಭಗಳಲ್ಲಿ ಅರ್ಥಕಾಮಗಳನ್ನು ತ್ಯಜಿಸಿಯಾದರೂ ಧರ್ಮವನ್ನೇ ಆಚರಿಸಬೇಕು. ವಿಶ್ವಾಸಕ್ಕೆ ಯೋಗ್ಯರಾದ,ಉತ್ತಮರಾದ, ನೀತಿಧರ್ಮನಿಷ್ಠರಾದ ಸಹಾಯಕರಿಂದ, ಮಾರ್ಗದರ್ಶನ ಪಡೆಯಬೇಕು. **ಅನಭಿಜ್ಞಾಯ ಶಾಸ್ತ್ರಾರ್ಥಾನ್ ಪುರುಷಾಃ ಪಶುಬುದ್ಧಯಃ** - ಪಶುವಿಗೆ ಸಮಾನವಾದ ಬುದ್ಧಿಯಿರುವ ಪುರುಷರು, ಶಾಸ್ತ್ರಾರ್ಥಗಳನ್ನು (ವಿದ್ಯೆಯನ್ನು ಗಳಿಸುವ ವಿಧಾನಗಳನ್ನು) ಚೆನ್ನಾಗಿ ತಿಳಿಯದೆ ಮಂತ್ರಾಲೋಚನೆ ಮಾಡುವುದು ಒಡೆಯನಿಗೂ, ದೇಶಕ್ಕೂ, ಅಹಿತಕಾರಿ. ಶಾಸ್ತ್ರ ತಿಳಿಯದೆ ಕೇವಲ ಅಪಾರವಾದ ಐಶ್ವರ್ಯ ಹಾಗೂ ಸ್ಥಾನವನ್ನು ಬಯಸುವವರ ತೋರಿಕೆಗೆ ಹಿತವೆನಿಸಿದರೂ ಮೂಲತಃ ಅಹಿತಕರವಾದ ಯಾವ ಮಾತನ್ನೂ ಮಾನ್ಯ ಮಾಡಬಾರದು. ನಿನ್ನ ಬಲಾಬಲಗಳನ್ನು ಚೆನ್ನಾಗಿ ತಿಳಿದು, ನಿನ್ನ ಹಿತವನ್ನೇ ಬಯಸಿದ್ದ ಅಣ್ಣ ವಿಭೀಷಣ ಹಾಗೂ ನಿನ್ನ ಪತ್ನಿ ಮಂಡೋದರಿ ಹಿಂದೆ ಯಾವ ಸಲಹೆಗಳನ್ನು ನೀಡಿದ್ದರೋ ಅದೇ ನಿನಗೆ ಹಿತಕರವಾದುದು. ಅದಲ್ಲದೆ ಕೇವಲ ತಮ್ಮ ಸ್ಥಾನ, ಐಶ್ವರ್ಯದ ಆಸೆಗಾಗಿ, ನಿನ್ನನ್ನು ಸ್ತುತಿ ಮಾಡಿ, ನಿನ್ನ ಹಿತವನ್ನು ಬಯಸದೆ, ನಿನ್ನನ್ನು ಉಬ್ಬಿಸಿ, ನಿನ್ನನ್ನು ತಪ್ಪು ಮಾರ್ಗಕ್ಕೆ ಎಳೆಯುತ್ತಿರುವ ಮಂತ್ರಿಗಳ ಸಮಾಲೋಚನೆ ಅಯುಕ್ತವಾದುದು.'' ಕುಂಭಕರ್ಣನ ಈ ಮಾತು ರಾವಣನಿಗೆ ಸರ್ವವಿಧ ಶ್ರೇಯಸ್ಕರವಾಗಿದ್ದರೂ ಹೊಗಳುಭಟ್ಟರ ಸ್ತುತಿಗಳಿಂದ, ಸ್ವತಃ ದರ್ಪ, ವೀರ್ಯಗಳಿಂದ ಕೊಬ್ಬಿಹೋಗಿದ್ದ ಅವನು ಈ ಹಿತನುಡಿಗಳನ್ನು ಕೇಳದೆ ತಾನೊಬ್ಬನೇ ಅಲ್ಲದೆ ಎಷ್ಟು ಜನರ ಎಷ್ಟು ರೀತಿಯ ಹಾನಿಗೆ ಕಾರಣನಾದ!

ಪ್ರಸ್ತುತ ನಮ್ಮ ನಾಯಕರು ಹಾಗೂ ಅವರ ಬೆಂಬಲಿಗರಾಗಿ ಬದುಕಲು ಯತ್ನಿಸುತ್ತಿರುವ ನಮ್ಮ ಯುವ ಪೀಳಿಗೆಗೆ ಮೇಲಿನ ಮಾತುಗಳು ಎಷ್ಟು ಹೊಂದುತ್ತದೆ ಎಂಬುದು ಗಮನಾರ್ಹ. ಶ್ರಮವೇ ಇಲ್ಲದೆ ಹಣ ಗಳಿಸಬೇಕು, ಲಾಭದ ಕಡೆಗೇ ಗಮನ ಹರಿಸಿ ಹಿತ, ಅಹಿತ ತಿಳಿಯದೆ ವಿವೇಕಶೂನ್ಯರಾಗಿ ಬಂಧು ಬಳಗ, ಸ್ನೇಹ, ಪ್ರೀತಿ, ವಿಶ್ವಾಸ, ಸಂಸ್ಕೃತಿ, ಧರ್ಮ, ನೀತಿ ಎಲ್ಲವನ್ನೂ ಗಾಳಿಗೆ ತೂರಲು ಸಿದ್ಧವಿರುವ ಇವರು ಯಾವಾಗ ವಿವೇಕಿಗಳಾಗುತ್ತಾರೆ? ಇವುಗಳನ್ನು ತಿಳಿದು ಅನುಷ್ಠಾನಕ್ಕೆ ತಂದು, ತಮ್ಮನ್ನು ಹಾಗೂ ತನ್ಮೂಲಕ ದೇಶವನ್ನು ಅಭಿವೃದ್ಧಿ ಪಥಕ್ಕೆ ತರಲು ಯತ್ನಿಸುವ ಎಲ್ಲೋ ಕೆಲವರಿಗೆ ಬೆಂಬಲ ನೀಡುವ ಸಜ್ಜನರಿಲ್ಲವೆ ನಮ್ಮ ದೇಶದಲ್ಲಿ! ನಮ್ಮ ಪ್ರಜ್ಞಾವಂತರು ವಿದೇಶಗಳಿಗೆ ವಲಸೆ ಹೋಗುತ್ತಿದ್ದರೂ ನಾವು ಮಲಗಿರುವೆವು. ದೇಶದ ಹಿತವೇ ನಮ್ಮ ಹಿತವೆನ್ನುವ ಘೋಷಣೆಯನ್ನು ಆಲಿಸಿ ಪಾಲಿಸುವ ಭಾರತೀಯರಾಗೋಣ. ನಮ್ಮ ದೇಶ ಸಂಸ್ಕೃತಿಗಳ ಬಗ್ಗೆ ಹೆಮ್ಮೆ ತಾಳಿ ಸಂರಕ್ಷಿಸೋಣ.